# ಮಗು ಸಂಕಟದಲ್ಲಿದ್ದರೆ, ನೀವು ಚೈಲ್ಡ್ ಲೈನ್‌ಗೆ ಕರೆ ಮಾಡಬಹುದು – 112

## ಮಕ್ಕಳ ನ್ಯಾಯ ವ್ಯವಸ್ಥೆಯಲ್ಲಿರುವ ಪ್ರಮುಖ ವ್ಯಕ್ತಿಗಳು

**ಎಸ್‌ಜೆಪಿಯು** : ಮಕ್ಕಳ ವಿಶೇಷ ಪೊಲೀಸ್ ಘಟಕ (ಸ್ಪೆಷಲ್ ಜುವನೈಲ್ ಪೊಲೀಸ್ ಯೂನಿಟ್)

**ಎಫ್‌ಐಆರ್** : ಪ್ರಥಮ ವರ್ತಮಾನ ವರದಿ (ಫರ್ಸ್ಟ್ ಇನ್ಫೊರ್ಮೇಷನ್ ರಿಪೋರ್ಟ್)

**ಡಿಸಿಪಿಒ** : ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿ (ಡಿಸ್ಟ್ರಿಕ್ಟ್ ಚೈಲ್ಡ್ ಪ್ರೊಟೆಕ್ಷನ್ ಆಫಿಸರ್)

**ಜೆಜೆಬಿ** : ಮಕ್ಕಳ ನ್ಯಾಯ ಮಂಡಳಿ (ಜುವನೈಲ್ ಜಸ್ಟೀಸ್ ಬೋರ್ಡ್)

**ಸಿಡಬ್ಲ್ಯೂಸಿ** : ಮಕ್ಕಳ ಕಲ್ಯಾಣ ಸಮಿತಿ (ಚೈಲ್ಡ್ ವೆಲ್ಫೇರ್ ಕಮಿಟಿ)

**ಜೆಜೆ ಆಕ್ಟ್** : ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015

**ಪಿಒ** : ಪರಿವೀಕ್ಷಣಾಧಿಕಾರಿ (ಪ್ರೊಬೇಷನ್ ಆಫಿಸರ್)

**ಓಎಚ್** : ಪರಿವೀಕ್ಷಣಾಲಯ (ಒಬ್ಸರ್ವೇಶನ್ ಹೋಂ)

**ಜಾಮೀನು** - ಮಕ್ಕಳ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ, 2015ರ ಸೆಕ್ಷನ್ 12ರ ಪ್ರಕಾರ ಪ್ರತಿ ಮಗುವಿಗೂ ಜಾಮೀನು ಪಡೆಯುವ ಹಕ್ಕು ಇರುತ್ತದೆ.


## ಜೆಜೆ ಕಾಯ್ದೆಯ ಪ್ರಕಾರ ಅಪರಾಧಗಳ ವಿಧಗಳು

| | |
|---|---|
| **ಸಣ್ಣ** ಸೆಕ್ಷನ್ 2(45) | ಗರಿಷ್ಠ ಶಿಕ್ಷೆಯು ಮೂರು ವರ್ಷಗಳವರೆಗು ಬಂಧನ (ಉದಾ: ಮೊಬೈಲ್ ಕಳ್ಳತನ, ಚೈನ್ ಕಳ್ಳತನ, ಮಾದಕ ದ್ರವ್ಯವನ್ನು ಇಟ್ಟುಕೊಳ್ಳುವುದು) – ಎಫ್‌ಐಆರ್ ದಾಖಲಿಸುವುದು ಬೇಡ |
| **ಗುರುತರ** (ಸೆಕ್ಷನ್ 2(54) | ಗರಿಷ್ಠ ಶಿಕ್ಷೆಯು ಮೂರು ವರ್ಷಗಳಿಂದ ಏಳು ವರ್ಷಗಳೊಳಗಿನ ಬಂಧನ (ಉದಾ: ಕಳ್ಳತನ, ಆಕ್ರಮಣ, ಸಂಘಟಿತ ಅಪರಾಧ) – ಎಫ್‌ಐಆರ್ ದಾಖಲಿಸುವುದು ಬೇಡ |
| **ಹೀನ** (ಸೆಕ್ಷನ್ 2(33) | ಕನಿಷ್ಠ ಶಿಕ್ಷೆಯು ಏಳು ವರ್ಷ ಅಥವ ಹೆಚ್ಚಿನ ಬಂಧನ (ಉದಾ: ಅತ್ಯಾಚಾರ, ಕೊಲೆ, ಕಳ್ಳಸಾಗಣೆ) – ಮಗುವಿನ ಹಿತಾಸಕ್ತಿಯಲ್ಲಿದ್ದರೆ ಮಾತ್ರ ಎಫ್‌ಐಆರ್ ದಾಖಲಿಸುವುದು) |

ಪ್ರಕಟಣೆ:
ಮಗು ಮತ್ತು ಕಾನೂನು ಕೇಂದ್ರ
ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ
ನಾಗರಭಾವಿ, ಬೆಂಗಳೂರು – 560 242
ದೂ: +91-80-2301 0000 | ccl@nls.ac.in

# ಬಂಧನ ಮತ್ತು ಮೊದಲ ಹಾಜರಿ ಕುರಿತಾದ ಟೂಲ್‌ಕಿಟ್ (ಪರಿಷ್ಕೃತ)

ಈ ಪ್ರಸ್ತುತ ಸಂಭಾಷಣೆಯು ಪೊಲೀಸ್, ಮಕ್ಕಳ ಹಕ್ಕಿನ ಹೋರಾಟಗಾರ (ಇನ್ನು ಮುಂದೆ ಸಾಮಾಜಿಕ ಕಾರ್ಯಕರ್ತ ಎಂದು ಸಂಬೋಧಿಸಲಾಗುತ್ತದೆ) ಮತ್ತು ಮಗುವಿನ ನಡುವೆ ನಡೆಯುತ್ತದೆ. ಈ ಚರ್ಚೆಯು ಮಗುವಿನ ತನ್ನ ಹಕ್ಕುಗಳನ್ನು ತಿಳಿಸುವುದಕ್ಕಾಗಿ ನಡೆಯುತ್ತದೆ. ಇಲ್ಲಿ, ಮಗುವು ಮತ್ತೊಂದು ಮಗುವಿನ ಮೇಲೆ ಆಕ್ರಮಣ ಮಾಡಿರುತ್ತಾನೆ ಹಾಗು ಬಂಧಿತಗೊಂಡು ಪೊಲೀಸ್ ಠಾಣೆಗೆ ಕರೆದುತರಲಾಗಿದೆ.




8
ನೀನು ಪೊಲೀಸರಿಗೆ ಏನಾದರು ಹಣವನ್ನು ನೀಡಿದ್ದೀಯಾ ಅಥವಾ ಯಾವುದಾದರು ದಾಖಲೆಗೆ ಸಹಿ ಹಾಕಿದ್ದೀಯಾ?
ಹೌದು ಒಳ್ಳೆಯದು. ಆದರೆ ನಿನ್ನ ಪೋಷಕರು ಕೆಲವು ದಾಖಲೆಗಳಿಗೆ ಸಹಿ ಹಾಕಬೇಕಾಗುತ್ತದೆ.
ಇಲ್ಲ ಮೇಡಂ, ನಾನು ಯಾವುದೇ ದಾಖಲೆಗೆ ಸಹಿ ಹಾಕಿಲ್ಲ ಮತ್ತು ಹಣವನ್ನು ಸಹ ನೀಡಿಲ್ಲ.
9
ಮಗುವಿನ ವಿರುದ್ಧ ಯಾವುದೇ ಎಫ್ ಐ ಆರ್ ದಾಖಲಿಸಿಲ್ಲ ತಾನೆ?
ಇಲ್ಲ ಮೇಡಂ, ಸಣ್ಣ ಮತ್ತು ಗುರುತರ ಅಪರಾಧಗಳಿಗೆ ಎಫ್‌ಐಆರ್ ದಾಖಲಿಸುವಂತಿಲ್ಲ.
10
ನಿನ್ನನ್ನು ವೈದ್ಯಕೀಯ ತಪಾಸಣೆಗೆ ಕರೆದುಕೊಂಡು ಹೋಗಿದ್ದಾರೆಯೇ?
ಏನದು?
ವೈದ್ಯಕೀಯ ತಪಾಸಣೆ
11
ನಿನ್ನ ಬಂಧನದ ನಂತರ ವೈದ್ಯಕೀಯ ಅಧಿಕಾರಿ ಅಥವ ಅಭ್ಯಾಸಿ ನಿನಗೆ ಆರಾಮಾಗಿರುವ ಪರಿಸರದಲ್ಲಿ ನಿನ್ನ ತಪಾಸಣೆಯನ್ನು ನಡೆಸಬೇಕು. ನಿನಗೆ ಯಾವುದಾದರು ಗಾಯ ಅಥವ ಮೂಗೇಟು ಇದ್ದರೆ ಅದನ್ನು ವೈದ್ಯರಿಗೆ ತಿಳಿಸಬೇಕು. ಅವರು ಅದನ್ನು ವೈದ್ಯಕೀಯ ವರದಿಯಲ್ಲಿ ದಾಖಲಿಸಿಕೊಳ್ಳುತ್ತಾರೆ.
12
ಮೊದಲ ಹಾಜರಿಗೆ ಅನುಸಾರದ ಅವಶ್ಯಕತೆಗಳ ಪ್ರಕಾರ ಈತನ ವೈದ್ಯಕೀಯ ತಪಾಸಣೆಯು ಮತ್ತು ಮಕ್ಕಳ ನ್ಯಾಯ ಮಂಡಳಿಯೆದುರು ಹಾಜರಿಕೆಯು ೨೪ ಘಂಟೆಯೊಳಗೆ ಆಗುವುದನ್ನು ಖಚಿತಪಡಿಸಿಕೊಳ್ಳಿ.
ಹೌದು ಮೇಡಂ. ಈತನ್ನು ಮಕ್ಕಳ ಸ್ನೇಹಿ ರೀತಿಯಲ್ಲಿ ನಡೆಸಿಕೊಳ್ಳಲಾಗುವುದು. ಮಗುವಿನ ವೈದ್ಯಕೀಯ ತಪಾಸಣೆ ನಡೆಯುತ್ತಿರುವಂತೆ ಇಲ್ಲಿ ಚಿತ್ರಿಸಬಹುದು. ಇದರ ನಂತರ ಮೊದಲ ಹಾಜರಿಯ ಅವಶ್ಯಕತೆಯ ಪ್ರಕಾರ ಆತನನ್ನು ಮಕ್ಕಳ ನ್ಯಾಯ ಮಂಡಳಿಗೆ ತರಲಾಗುವುದು.
13
ಮೊದಲ ಹಾಜರಿ
14
ನಾನು ಎಲ್ಲಿದ್ದೀನಿ? ಈ ಕಾರ್ಯವಿಧಾನ ಏನು? ಇದು ನ್ಯಾಯಾಲಯ ಅಥವ ಕಾರಾಗೃಹದ ಹಾಗಿಲ್ಲವಲ್ಲ?
ವೀಕ್ಷಣಾಲಯ
ನಾವು ವೀಕ್ಷಣಾಲಯದಲ್ಲಿದ್ದೇವೆ. ನಿನ್ನನ್ನು ವೀಕ್ಷಣಾಲಯದಲ್ಲಿ ಭರ್ತಿ ಮಾಡುವ ಮುನ್ನ, ಮಕ್ಕಳ ನ್ಯಾಯ ಮಂಡಳಿಯ ಎದುರು ದೈಹಿಕವಾಗಿ ಅಥವ ವೀಡಿಯೊ ಕರೆ ಮೂಲಕ ನಿನ್ನನ್ನು ಹಾಜರಿ ಪಡಿಸಬೇಕು. ಇದನ್ನು ಮೊದಲ ಹಾಜರಿ ಎಂದು ಕರೆಯಲಾಗುತ್ತದೆ.
15
ನಾವು ಮಕ್ಕಳ ನ್ಯಾಯ ಮಂಡಳಿ.
ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಪ್ರಕರಣಗಳನ್ನು ನಿಭಾಯಿಸುತ್ತೇವೆ.
ಮ್ಯಾಜಿಸ್ಟ್ರೇಟ್ ಹಾಗು ಸಾಮಾಜಿಕ ಕಾರ್ಯ ಮತ್ತು ಮನೋವಿಜ್ಞಾನದ ಹಿನ್ನೆಲೆ ಹೊಂದಿರುವ ತಲಾ ಒಬ್ಬೊಬ್ಬ ಸದಸ್ಯರನ್ನು ಒಳಗೊಂಡಂತೆ ಮೂರು ಸದಸ್ಯರಿರುತ್ತಾರೆ.
16
ಮಗುವಿನ ಪೋಷಕರು ಇಲ್ಲದ್ದಾರೆಯೇ? ಜೆಜೆ ಕಾಯ್ದೆಯ ಅನುಸಾರ ಪೋಷಕರು ಇಲ್ಲದ್ದಿದ್ದಲ್ಲಿ ನಾವು ಮಗುವಿನೊಂದಿಗೆ ಮಾತನಾಡುವಂತಿಲ್ಲ.
ನಾನು ಮಗುವಿನ ತಾಯಿ. ನಾನು ಹಾಜರಿದ್ದೇನೆ
17
ನಾವು ಆರಂಭಿಸುವ ಮುನ್ನ, ಕಾನೂನು ಸೇವೆಗಳ ಪ್ರಾಧಿಕಾರದ ಅಡಿಯಲ್ಲಿ ನಿನಗೆ ಉಚಿತ ಕಾನೂನು ಸೇವೆ ಪಡೆಯುವ ಅಧಿಕಾರವಿದೆ ಹಾಗು ನಿನಗೆ ಜಾಮೀನು ಪಡೆಯುವ ಹಕ್ಕು ಇದೆ. ಅಂದರೆ ನಿನಗೆ ಜಾಮೀನನ್ನು ನಿರಾಕರಿಸುವಂತಿಲ್ಲ. ನಿನಗೆ ವಕೀಲರ ಅವಶ್ಯಕತೆ ಇದೆಯೇ?
ಹೌದು, ನಮಗೆ ಉಚಿತ ಕಾನೂನು ಸೇವೆ ಒದಗಿಸುವ ವಕೀಲರು ಬೇಕಾಗಿದ್ದಾರೆ. ನನಗೆ ಭಯವಾಗುತ್ತಿದೆ, ನಾನು ತಪ್ಪಿತಸ್ಥ ಎಂದರ್ಥವೇ?
18
ಇಲ್ಲ, ನೀನು ತಪ್ಪಿತಸ್ಥ ಎಂದರ್ಥವಲ್ಲ. ನಿನ್ನ ಪ್ರಕರಣವನ್ನು ನಾವು ತನಿಖೆ ಮಾಡುತ್ತದ್ದೇವೆ ಎಂದರ್ಥ. ನಿನ್ನನ್ನುಸುರಕ್ಷಿತವಾಗಿ ವೀಕ್ಷಣಾಲಯದಲ್ಲಿ ಇರಿಸಲಾಗುವುದು. ಇಲ್ಲಿ ನಿನಗೆ ಜಾಮೀನು ಸಿಗುವವರೆಗೂ ನಿನ್ನನ್ನು ನೋಡಿಕೊಳ್ಳುವವರಿರುತ್ತಾರೆ. ಇದು ತಾತ್ಕಾಲಿಕ ಮಾತ್ರ.
19
ನಾನು ಕಾನೂನು ನೆರವು ವಕೀಲ. ನಿನ್ನ ಪ್ರಕರಣದಲ್ಲಿ ನಿನಗೆ ಸಹಾಯ ಮಾಡಲು ನಾನು ಇದ್ದೇನೆ. ನೀನು ಮತ್ತು ನಿನ್ನ ಕುಟುಂಬದವರು ಯಾವಾಗ ವಿಚಾರಣೆಗೆ ಬರಬೇಕೆಂದು ನಾನು ತಿಳಿಸುತ್ತೇನೆ. ಭಯ ಪಡಬೇಡ. ಈ ಪ್ರಕ್ರಿಯೆಯಲ್ಲಿ ಮಾರ್ಗದರ್ಶನ ನೀಡಲು ನಾನು ಇದ್ದೇನೆ.